

# ಶ್ರದ್ಧೆ – ಅದರ ಮಹಿಮೆ

ವೈಷ್ಣವಿ ಪಿ.

ನಮ್ಮ ಪರಂಪರೆಯಲ್ಲಿ ಶ್ರದ್ಧೆಯೆಂಬುದು ಮಾನವನು ಬೆಳೆಸಿಕೊಳ್ಳಬೇಕಾದ ಅತ್ಯಂತ ಶ್ರೇಷ್ಠ ಗುಣವೆಂದು ಪರಿಗಣಿಸಲಾಗಿದೆ. ಸಾಮಾನ್ಯ ಶಿಕ್ಷಣದಿಂದ ಆರಂಭಿಸಿ ಆತ್ಮಸಾಕ್ಷಾತ್ಕಾರದವರೆಗೂ ಶ್ರದ್ಧೆಯೆಂಬ ಗುಣ ನಮ್ಮನ್ನು ಕೈಹಿಡಿದು ಮುನ್ನಡೆಸುತ್ತದೆ. ಈ ಕುರಿತು ವಿವರಿಸಿರುವ ಲೇಖಕಿ, ಮೈಸೂರು ಆಶ್ರಮದ ಭಕ್ತರಾಗಿದ್ದು, ಇಂಜಿನಿಯರಿಂಗ್ ವ್ಯಾಸಂಗ ಮಾಡುತ್ತಿದ್ದಾರೆ.

ಶ್ರದ್ಧೆ ಎಂದರೇನು? ಶ್ರದ್ಧೆ ಎಂದರೆ ದೃಢ ನಂಬಿಕೆ, ವಿಶ್ವಾಸ. ನಾವು ಏನೇ ಮಾಡಿದರೂ ಎಲ್ಲ ಕಾರ್ಯಗಳಲ್ಲಿಯೂ ಶ್ರದ್ಧೆಯನ್ನು ಹೊಂದಬೇಕು. ನಮ್ಮಲ್ಲಿ ಶ್ರದ್ಧೆ ಇದ್ದರೆ ನಾವು ಏನನ್ನಾದರೂ ಸಾಧಿಸಬಹುದು. ಎಲ್ಲಕ್ಕಿಂತ ಮಿಗಿಲಾದದ್ದು ಭಗವಂತನ ಮೇಲೆ ಶ್ರದ್ಧೆಯನ್ನು ಇಟ್ಟುಕೊಳ್ಳುವುದು. ನಾವು ಎಂದೂ ಶ್ರದ್ಧೆಯನ್ನು ಕಳೆದುಕೊಳ್ಳಬಾರದು. ಸದಾ ಭಗವಂತನಲ್ಲಿ ಶ್ರದ್ಧೆಗಾಗಿ ಪ್ರಾರ್ಥಿಸಬೇಕು. ಶ್ರೀರಾಮಕೃಷ್ಣರು ಹೀಗೆ ಹೇಳುತ್ತಿದ್ದರು: ''ಆಗಾಗ ನಿರ್ಜನ ಪ್ರದೇಶದಲ್ಲಿ ಭಗವಚ್ಚಿಂತನೆ ಮಾಡುತ್ತಿರಬೇಕು. ಆತನನ್ನು ಪ್ರಾರ್ಥಿಸಬೇಕು, 'ನನಗೆ ಶ್ರದ್ಧಾ ಭಕ್ತಿ ಕೊಡು' ಎಂಬುದಾಗಿ. ಶ್ರದ್ಧೆಯುಂಟಾಗಿಬಿಟ್ಟಿತು ಎಂದರೆ ಎಲ್ಲವೂ ದೊರೆತ ಹಾಗೆ.'' ಶ್ರದ್ಧೆಗಿಂತ ಮಿಗಿಲಾದ್ದು ಯಾವುದೂ ಇಲ್ಲ.

## ಶ್ರದ್ಧೆಯ ಶಕ್ತಿ ಅಪಾರ

ಶ್ರೀರಾಮಕೃಷ್ಣರು ಒಂದು ಕಥೆಯನ್ನು ಹೇಳುತ್ತಿದ್ದರು. ಒಬ್ಬ ಸಮುದ್ರವನ್ನು ದಾಟಲು ಕಷ್ಟಪಡುತ್ತಿದ್ದ. ಆಗ ವಿಭೀಷಣ ಅವನ ಪಂಚೆಯ ತುದಿಯಲ್ಲಿ ಏನನ್ನೋ ಇಟ್ಟು ಅವನಿಗೆ ಹೇಳಿದನು, ''ಎಲ್ಲಿಯತನಕ ನಿನ್ನಲ್ಲಿ ಇದರ ಮೇಲೆ ಶ್ರದ್ಧೆ ಇರುವುದೋ ಅಲ್ಲಿಯವರಿಗೆ ನೀನು ಸುಲಭವಾಗಿ ಸಾಗಬಹುದು'' ಎಂದು. ಅವನು ಅದಕ್ಕೊಪ್ಪಿ ಮುಂದೆ ನಡೆದ. ಮಧ್ಯದಲ್ಲಿ ಅವನಿಗೆ ಕುತೂಹಲವುಂಟಾಯಿತು, 'ಇದರಲ್ಲಿ ಏನಿದೆ?' ಎಂದು. ತೆರೆದು ನೋಡಿದ, ಅದರಲ್ಲಿ ರಾಮನಾಮ ಬರೆದಿತ್ತು. ಅದನ್ನು ಕಂಡು 'ಬರಿ ರಾಮ ನಾಮವೇ!' ಎಂದು ಹೇಳಿ ಶ್ರದ್ಧೆಯನ್ನು ಕಳೆದುಕೊಂಡ, ತಕ್ಷಣವೇ ಸಮುದ್ರದಲ್ಲಿ ಮುಳುಗಿ ಹೋದ. ಸಣ್ಣ ಕಾರ್ಯವಾದರೂ ಕೂಡ ನಾವು ಭಗವಂತನಲ್ಲಿ ದೃಢ ಶ್ರದ್ಧೆಯನ್ನು ಹೊಂದಬೇಕು.

ಸ್ವಾಮಿಜಿಯವರು ಹೇಳುತ್ತಿದ್ದರು: ''ನೀವು ದುರ್ಬಲರು ಎಂದು ಯೋಚಿಸಿದರೆ ನೀವು ದುರ್ಬಲರೇ ಆಗುವಿರಿ. ನೀವು ದುರ್ಬಲರಲ್ಲ ಎಂದು ಯೋಚಿಸಿದರೆ ನೀವು ದುರ್ಬಲರಾಗುವುದಿಲ್ಲ. ಹಾಗೆಯೇ ನಾವು ನಮ್ಮಲ್ಲಿ ಅಪಾರ ಶಕ್ತಿಯಿದೆ ಎಂದು ಯೋಚಿಸಬೇಕು. ಆ ಶಕ್ತಿಯನ್ನು ದುರುಪಯೋಗ ಮಾಡಿಕೊಳ್ಳದೆ ಭಗವಂತನನ್ನು ಪಡೆಯುವುದಕ್ಕೆ ಬಳಸಿಕೊಳ್ಳಬೇಕು.''

ನಾವು ಎಂದು ಯಾರನ್ನೂ 'ನೀವು ದುರ್ಬಲರು, ನಿಮ್ಮಿಂದ ಏನೂ ಸಾಧ್ಯವಿಲ್ಲ'ವೆಂದು ಹೇಳಬಾರದು. ಅವರಲ್ಲಿ ಬೇರೆ ಯಾವುದಾದರೂ ವಿಶೇಷ ಗುಣಗಳಿರಬಹುದು, ಅದರ ಮೇಲೆ ಅವರಿಗೆ ಆಸಕ್ತಿ, ಶ್ರದ್ಧೆ ಇರುತ್ತದೆ. ಅದನ್ನು ಬೇರೆಯವರು ಹಾಳು ಮಾಡಬಾರದು. ನಾವು ನಮ್ಮ ಗುರಿಯನ್ನು ದೃಢವಾಗಿ ಇಟ್ಟುಕೊಂಡು, ಅದರಲ್ಲಿ ಅಪಾರ ಶ್ರದ್ಧೆಯನ್ನು ಹೊಂದಬೇಕು.

ಶ್ರೀರಾಮಕೃಷ್ಣರು ಹೇಳುತ್ತಿದ್ದರು, ಯಾವಾಗ ಯಾರಿಗೂ ಲಂಕೆಗೆ ಹೋಗಲು ಸಮುದ್ರ ದಾಟಲಾಗುತ್ತಿರಲಿಲ್ಲವೋ ಆಗ ಹನುಮಂತನು ರಾಮನ ಮೇಲೆ ಇದ್ದ ಅಪಾರ ಶ್ರದ್ಧೆಯಿಂದ ಸಮುದ್ರವನ್ನು ದಾಟಿದನು. ಶ್ರದ್ಧೆ ಇದ್ದರೆ ನಾವು ಏನನ್ನಾದರೂ ಸಾಧಿಸಬಹುದು.

## ಶ್ರದ್ಧೆ ಮತ್ತು ಭಕ್ತಿ

ಸದಾ ಭಗವಂತನಲ್ಲಿ ಶ್ರದ್ಧೆಯಿಟ್ಟುಕೊಂಡು ಅವನ ನಾಮ ಸ್ಮರಣೆ ಮಾಡಬೇಕು. ಸದಾ ಅವನು ನಮ್ಮ ಜೊತೆಯಲ್ಲಿಯೇ

ಇರುವನು ಎಂದು ಭಾವಿಸಬೇಕು. ಶ್ರದ್ಧೆ ಇತ್ತೆಂದರೆ ಅವನ ದರ್ಶನ, ಮೋಕ್ಷಕ್ಕೆ ಯಾವುದೇ ಅಡ್ಡಿಯಿರುವುದಿಲ್ಲ. ಇದಕ್ಕೆ ಆದರ್ಶವಾಗಿ ನಾವು ಶ್ರೀರಾಮಕೃಷ್ಣರನ್ನೇ ನೋಡಬಹುದು. ಅವರು ಕಾಳೀಮಾತೆಯ ಮೇಲೆ ಅತ್ಯಂತ ಶ್ರದ್ಧೆ, ಭಕ್ತಿಯನ್ನು ಹೊಂದಿದ್ದರು. ಅವಳ ದರ್ಶನಕ್ಕಾಗಿ ಹಾತೊರೆಯುತ್ತಿದ್ದರು, ಅವಳ ಮೇಲೆ ಇದ್ದ ಶ್ರದ್ಧೆಯಿಂದಲೇ ಅವರಿಗೆ ಕಾಳೀಮಾತೆಯ ದರ್ಶನವಾಯಿತು. ಅವರ ಬಗ್ಗೆ ಯಾರೆಲ್ಲ ಏನೇನೋ ಹೇಳಿದ್ದರೂ, ಅವರು ಕಾಳಿಯ ಮೇಲೆ ಸಂಪೂರ್ಣ ಶ್ರದ್ಧೆಯನ್ನು ಹೊಂದಿದ್ದರು.

ಮಾಸ್ಟರ್ ಮಹಾಶಯರಿಗೂ ಸಹ ರಾಮಕೃಷ್ಣರ ಮೇಲೆ ಅಪಾರವಾದ ಶ್ರದ್ಧೆ, ಭಕ್ತಿಗಳಿದ್ದವು. ಅವರು ಏನೇ ಹೇಳಿದರೂ ಅದು ಅದು ಭಗವಂತನ ಆಜ್ಞೆ ಎಂದೇ ತಿಳಿಯುತ್ತಿದ್ದರು. ಶ್ರೀರಾಮಕೃಷ್ಣರ ಮೇಲೆ ಇದ್ದ ಶ್ರದ್ಧೆಯಿಂದಲೇ ಮಾಸ್ಟರ್ ಮಹಾಶಯರಿಗೆ ಶ್ರೀರಾಮಕೃಷ್ಣರು ಎಂತಹ ಮಹಾತ್ಮರು ಎಂಬುದು ತಿಳಿಯಿತು.

ಮಥುರನಾಥ ಬಾಬುವನ್ನು ಸಹ ನಾವು ನೋಡಬಹುದು, ಅವನು ಸದಾ ಶ್ರೀರಾಮಕೃಷ್ಣರ ಸೇವೆಗಾಗಿಯೇ ಹಾತೊರೆಯುತ್ತಿದ್ದ. ಅವರು ಏನೇ ಮಾಡಲು ಹೇಳಿದರೂ, ಆಗುವುದಿಲ್ಲವೆಂದು ಎಂದೂ ಹೇಳುತ್ತಿರಲಿಲ್ಲ. ಶ್ರೀರಾಮಕೃಷ್ಣರ ಮೇಲೆ ಇದ್ದ ಶ್ರದ್ಧೆಯಿಂದ ಆತನೂ ಕೂಡ ಶ್ರೀರಾಮಕೃಷ್ಣರನ್ನು ತಿಳಿಯುವುದು ಸಾಧ್ಯವಾಯಿತು.

ಹೀಗೆ ನಾವು ಹಲವಾರು ಮಂದಿ ಶ್ರೀರಾಮಕೃಷ್ಣರ ಭಕ್ತರನ್ನು ಮಾದರಿಯಾಗಿ ನೋಡಬಹುದು. ಅವರಲ್ಲಿ ಶ್ರೀರಾಮಕೃಷ್ಣರ ಮೇಲೆ ಎಷ್ಟು ಶ್ರದ್ಧೆಯಿತ್ತು ಎಂಬುದು ಅತ್ಯಂತ ಆಶ್ಚರ್ಯದ ಸಂಗತಿ. ಅವರ ಮೇಲೆ ಇದ್ದ ಶ್ರದ್ಧೆ, ಭಕ್ತಿಯಿಂದ ಹಲವಾರು ಭಕ್ತರಿಗೆ ಸಮಾಧಿಯಂತಹ ಅನುಭವಗಳುಂಟಾಗಿವೆ.

ಜನರು ಶ್ರೀರಾಮಕೃಷ್ಣರ ಮೇಲೆಯೇ ಶ್ರದ್ಧೆಯನ್ನು ಇಟ್ಟುಕೊಳ್ಳಬೇಕು ಎಂದೇನೂ ಇಲ್ಲ. ತಮ್ಮ ತಮ್ಮ ಇಷ್ಟ ದೇವತೆಯ ಮೇಲೆ ಶ್ರದ್ಧೆಯನ್ನು ಇಟ್ಟುಕೊಳ್ಳಬಹುದು. ಆದರೆ ಶುದ್ಧ ಪ್ರೀತಿ ಇಟ್ಟುಕೊಳ್ಳಬೇಕು, ಭಕ್ತಿ, ವೈರಾಗ್ಯವನ್ನು ಹೊಂದಬೇಕು.

## ಶ್ರದ್ಧೆ ಉಂಟಾಗುವುದು ಹೇಗೆ?

ಶ್ರದ್ಧೆಯು ಆಗಲೇ ಮಾನವನಲ್ಲಿ ಇರುತ್ತದೆ. ನಮ್ಮ ವಿಚಾರ, ತರ್ಕ ಕಡಿಮೆಯಾದಾಗ ಶ್ರದ್ಧೆಯು ಜಾಗೃತವಾಗುತ್ತದೆ. ಶ್ರದ್ಧೆಯಿಂದ ಸತ್ಯವನ್ನು ಪಡೆಯಬಹುದು. ಶ್ರದ್ಧೆಯು ಮಾನವನಲ್ಲಿ ಸಕಾರಾತ್ಮಕ ವರ್ತನೆಯನ್ನು ಹೆಚ್ಚಿಸುತ್ತದೆ. ವಿಶ್ವಾಸ ಅಥವಾ ನಂಬಿಕೆ ಇಲ್ಲದಿದ್ದರೆ ಶ್ರದ್ಧೆಯು ಇರುವುದಿಲ್ಲ. ಶ್ರದ್ಧೆ ಇಲ್ಲವೆಂದರೆ ಏನನ್ನೂ ಸಾಧಿಸಲಾಗುವುದಿಲ್ಲ.

ಶ್ರೀರಾಮಕೃಷ್ಣರು ಸದಾ ಭಗವದ್ ಶ್ರದ್ಧೆಗೆ ಪ್ರಮುಖ್ಯತೆಯನ್ನು ಕೊಡುತ್ತಿದ್ದರು. ಅದಕ್ಕೆ ತಕ್ಕ ರೀತಿಯ ಸರಳವಾದ ಕಥೆಗಳನ್ನು ಭಗವದ್ ಭಕ್ತರಿಗೆ ಹೇಳುತ್ತಿದ್ದರು. ಸ್ವಾಮೀಜಿಯವರು ಆತ್ಮಶ್ರದ್ಧೆಗೆ ಪ್ರಮುಖ್ಯತೆಯನ್ನು ನೀಡುತ್ತಿದ್ದರು. ಅವರು ಹೇಳುತ್ತಿದ್ದರು, ''ನಮ್ಮಲ್ಲಿ ನಮ್ಮ ಬಗ್ಗೆ ಶ್ರದ್ಧೆ ಇಲ್ಲದಿದ್ದರೆ ಭಗವಂತನಲ್ಲಿ ಶ್ರದ್ಧೆಯನ್ನು ಹೊಂದಲು ಸಾಧ್ಯವಿಲ್ಲ. ಶ್ರದ್ಧೆ ಇದ್ದರೆ ಆತ್ಮಜ್ಞಾನವನ್ನು ಪಡೆಯಬಹುದು.''

ಶ್ರೀಮದ್ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಹೇಳುತ್ತಾನೆ:

**ಸತ್ತ್ವಾನುರೂಪಾ ಸರ್ವಸ್ಯ ಶ್ರದ್ಧಾ ಭವತಿ ಭಾರತ।**
**ಶ್ರದ್ಧಾಮಯೋಽಯಂ ಪುರುಷೋ ಯೋ ಯಚ್ಛ್ರದ್ಧಃ ಸ ಏವ ಸಃ॥**

'ಎಲ್ಲರ ಶ್ರದ್ಧೆಯೂ ಅವರವರ ಅಂತಃಕರಣಕ್ಕೆ ಅನುರೂಪವಾಗಿರುತ್ತದೆ. ಈ ಪುರುಷನು ಶ್ರದ್ಧಾಮಯನು; ಯಾವನು ಯಾವ ಶ್ರದ್ಧೆಯುಳ್ಳವನೋ ಅವನು ಅಂತಹವನೇ.'

ಶ್ರದ್ಧೆಯುಳ್ಳವನಿಗೆ ಮಾತ್ರವೇ ಜ್ಞಾನವು ಲಭಿಸುತ್ತದೆ. ಶ್ರದ್ಧೆಯು ಜ್ಞಾನವನ್ನು ಸ್ವೀಕರಿಸಲು ಮನಃಶುದ್ಧಿಯನ್ನು ಮಾಡುತ್ತದೆ. ಶ್ರದ್ಧೆಯೆಂದರೆ ಮೂಢನಂಬಿಕೆಯಲ್ಲ, ಯಾವುದೇ ಸಂಗತಿಯನ್ನು ವಿಚಾರ ಮಾಡದೆ ನಂಬುವುದೂ ಅಲ್ಲ. ಒಳ್ಳೆಯ ಮತ್ತು ಸತ್ಯವಾದ ಮೌಲ್ಯಗಳನ್ನು ಸ್ವೀಕರಿಸಲು ಶ್ರದ್ಧೆಯು ಪ್ರೇರಣೆಯನ್ನು ಉಂಟುಮಾಡುತ್ತದೆ.

## ಪ್ರಯತ್ನದಿಂದಲೂ ಶ್ರದ್ಧೆ ಉಂಟಾಗುವುದು

ಗುರುಹಿರಿಯರು ಮತ್ತು ನಮ್ಮ ಧರ್ಮಗ್ರಂಥಗಳ ಉಪದೇಶಗಳಲ್ಲಿ ನಮಗೆ ಶ್ರದ್ಧೆ ಇರಬೇಕು. ಉಪದೇಶಗಳನ್ನು ಶ್ರದ್ಧೆಯಿಂದ ಅಧ್ಯಯನ ಮಾಡಿ ಅದರ ಸಾರವನ್ನು ತಿಳಿದು ಗುರಿಯನ್ನು ಮುಟ್ಟಲು ಪ್ರಯತ್ನಿಸಬೇಕು. ಗುರುಗಳು ಹೇಳುವ ಉಪದೇಶ, ಕಾರ್ಯಗಳನ್ನು ಶ್ರದ್ಧೆಯಿಂದ ಮಾಡಬೇಕು. ನಾವು ಭಗವಂತನಲ್ಲಿ ಶರಣಾಗತರಾಗದೆ ನಮ್ಮಲ್ಲಿ ಶ್ರದ್ಧೆ ಉಂಟಾಗದು.

''ಯಾರಿಗೆ ಶ್ರದ್ಧೆ ಇರುತ್ತದೆಯೋ ಅಂಥವರು ಜಗತ್ತಿನ ಇತಿಹಾಸವನ್ನು ಬೆಳಗುವವರು'' ಎಂದು ಸ್ವಾಮೀಜಿ ಹೇಳಿದ್ದಾರೆ. ಅವರು ಮುಂದುವರಿದು ಹೀಗೆ ಹೇಳುತ್ತಾರೆ: ''ಜಗತ್ತಿನ ಇತಿಹಾಸವೆಂದರೆ ಆತ್ಮಶ್ರದ್ಧೆಯುಳ್ಳವರ ಚರಿತ್ರೆ. ಅಂತಹ ಆತ್ಮಶ್ರದ್ಧೆ ನಮ್ಮಲ್ಲಿ ಅಡಗಿರುವ ದಿವ್ಯತೆಯನ್ನು ಪ್ರಕಟಗೊಳಿಸುವುದು. ಇದರಿಂದ ನೀವು ಏನನ್ನು ಬೇಕಾದರೂ ಸಾಧಿಸಬಹುದು. ನಿಮ್ಮಲ್ಲಿ ಆತ್ಮಶ್ರದ್ಧೆ ಇಲ್ಲದೆ ಇದ್ದಲ್ಲಿ , ನಿಮಗೆ ಉದ್ಧಾರವಿಲ್ಲ. ಮೊದಲು ಆತ್ಮಶ್ರದ್ಧೆ ಇರಲಿ!''

## ನಚಿಕೇತನ ಶ್ರದ್ಧೆ

ಶ್ರದ್ಧೆಗೆ ಒಂದು ಉತ್ತಮವಾದ ಉದಾಹರಣೆ ಕೊಡಬಹುದಾದರೆ, ನಚಿಕೇತನ ಶ್ರದ್ಧೆಯ ಬಗ್ಗೆ ಹೇಳಬಹುದು. ವಾಜ



ಶ್ರವಸ್ ಎಂಬ ಋಷಿ ಇದ್ದನು, ಅವನು ವಿಶ್ವಜಿತ್ ಎಂಬ ಯಾಗವನ್ನು ಮಾಡಿದನು. ಆ ಯಾಗವನ್ನು ಮಾಡಿದವರು ತಮ್ಮಲ್ಲಿ ಇರುವುದನ್ನೆಲ್ಲ ದಾನ ಮಾಡಬೇಕಾಗಿತ್ತು. ವಾಜಶ್ರವಸನ ಮಗನೇ ನಚಿಕೇತ. ಅವನು ಯಾಗಕ್ಕೆ ತೆಗೆದುಕೊಂಡು ಹೋಗುತ್ತಿದ್ದ ಹಸುಗಳನ್ನು ನೋಡಿದನು. ಶ್ರದ್ಧೆಯಿಂದ ಕೂಡಿದ ನಚಿಕೇತನು ಹೀಗೆ ಆಲೋಚಿಸಿದನು: ಈ ಹಸುಗಳಿಗೆ ವಯಸ್ಸಾಗಿಬಿಟ್ಟಿದೆ, ಅವುಗಳಿಗೆ ಶಕ್ತಿಯಿಲ್ಲ. ಇಂದ್ರಿಯಗಳೆಲ್ಲ ಮರಗಟ್ಟಿ ಹೋಗಿವೆ. ಇಂತಹ ಹಸುಗಳನ್ನು ದಾನವಾಗಿ ಕೊಟ್ಟರೆ, ನನ್ನ ತಂದೆ ಮುಂದೆ ದುಃಖವನ್ನು ತರುವ ಲೋಕಗಳಿಗೆ ಹೋಗುತ್ತಾನೆ. ನಾನು ಅವನ ಮಗನಲ್ಲವೆ? ತಂದೆಗೆ ಉಂಟಾಗುವ ಆಪತ್ತನ್ನು ನಾನು ತಡೆಯಬೇಕಲ್ಲವೆ? ಎಂದು ಒಂದು ಉಪಾಯವನ್ನು ಮಾಡುತ್ತಾನೆ. ನನ್ನ ತಂದೆ ಈ ಯಾಗದಲ್ಲಿ ಯಾವುದಾದರೂ ಒಳ್ಳೆಯದನ್ನು ದಾನವಾಗಿ ಕೊಟ್ಟರೆ ಅದರಿಂದ ಅವನಿಗೆ ಪುಣ್ಯ ಸಿಗುತ್ತದೆ. ಅದರಿಂದ ಅವನು ನನ್ನನ್ನೇ ದಾನವಾಗಿ ಕೊಟ್ಟುಬಿಟ್ಟರೆ, ಪಾಪದಿಂದ ಪಾರಾಗುತ್ತಾನೆ ಎಂದು ಯೋಚಿಸಿದನು. ನಚಿಕೇತನು ತಂದೆಯ ಬಳಿ ಬಂದು ಕೇಳುತ್ತಾನೆ. ''ಅಪ್ಪಾ, ನನ್ನನ್ನು ಯಾರಿಗೆ ದಾನವಾಗಿ ಕೊಡುತ್ತೀಯೆ?'' ತಂದೆಯು ಯಾಗಕ್ಕೆ ಬೇಕಾದ ತಯಾರಿಯನ್ನು ಮಾಡುತ್ತಿದ್ದನು. ಅವನು ನಚಿಕೇತನ ಮಾತುಗಳನ್ನು ಗಂಭೀರವಾಗಿ ತೆಗೆದುಕೊಳ್ಳಲಿಲ್ಲ. ನಚಿಕೇತನು ಬಿಡದೆ ಮತ್ತೆ ಮತ್ತೆ ಎರಡು ಸಲ ಅದೇ ಪ್ರಶ್ನೆಯನ್ನು ಕೇಳಿದನು. ಮೂರನೆಯ ಸಲ ಕೇಳಿದಾಗ ತಂದೆ ಕೋಪದಿಂದ, ''ನಿನ್ನನ್ನು ಯಮನಿಗೆ ಕೊಟ್ಟಿದ್ದೇನೆ'' ಎಂದು ಹೇಳಿದನು. ಸಿಟ್ಟಿನಲ್ಲಿ ಆಡಿದ ಮಾತಿಗೆ ತಂದೆ ಬಹಳ ಪಶ್ಚಾತ್ತಾಪಪಟ್ಟನು. ಆದರೆ ಏನು ಮಾಡುವುದು? ಯಜ್ಞದ ಸಮಯದಲ್ಲಿ ಆಡಿದ ಮಾತುಗಳನ್ನು ಉಳಿಸಿಕೊಳ್ಳಬೇಕು. ಅದ್ದರಿಂದ ನಚಿಕೇತನು ಯಮನ ಲೋಕಕ್ಕೆ ಹೋದನು. ಯಮನ ಲೋಕಕ್ಕೆ ಹೋದಾಗ ಆ ಸಮಯದಲ್ಲಿ ಯಮನು ಇರಲಿಲ್ಲ. ಆಗ ನಚಿಕೇತನು ಅವನಿಗೋಸ್ಕರ ಕಾದು ನಿಂತನು. ಯಮನು ಅವನನ್ನು ಕಾಯಿಸಿದ್ದಕ್ಕೆ ಪ್ರತಿಯಾಗಿ ಮೂರು ವರಗಳನ್ನು ಕೇಳಲು ಹೇಳಿದನು. ಆಗ ನಚಿಕೇತನು ಆ ಮೂರು ವರಗಳನ್ನು ಕೇಳಿದನು. ಮೂರನೆಯ ವರವಾಗಿ ಆತ್ಮವಿದ್ಯೆಯನ್ನು ಹೇಳಿಕೊಡಲು ಕೇಳಿದಾಗ ಯಮನು 'ಅದನ್ನು ಬಿಟ್ಟು ಬೇರೆ ಏನನ್ನಾದರೂ ಕೇಳು' ಎಂದು ಹೇಳುತ್ತಾನೆ. ಆದರೆ ನಚಿಕೇತನಿಗೆ ಬೇರೆ ಏನೂ ಬೇಕಾಗಿರಲಿಲ್ಲ; ಅವನು ತನಗೆ ಅದೇ ವರವನ್ನು ಕೊಡು ಎಂದನು. ನಚಿಕೇತನಲ್ಲಿ ದೃಢವಾದ ಶ್ರದ್ಧೆಯಿದ್ದುದರಿಂದ, ಅವನು ಯಮನಿಂದ ಆತ್ಮವಿದ್ಯೆಯನ್ನು ಕಲಿತುಕೊಂಡು ಹಿಂದಿರುಗಿದನು.

### ಶ್ರದ್ಧೆಯನ್ನು ಕುರಿತು ಸ್ವಾಮೀಜಿ

ಸ್ವಾಮೀಜಿಯವರು ಆತ್ಮಶ್ರದ್ಧೆಯ ಬಗ್ಗೆ ಹೀಗೆ ಹೇಳುತ್ತಾರೆ: ''ಆತ್ಮಶ್ರದ್ಧೆಯ ಆದರ್ಶ ನಮಗೆ ಬಹಳ ಸಹಕಾರಿ. ನಮ್ಮಲ್ಲಿ ನಮಗೆ ನಂಬಿಕೆಯನ್ನು ಹೆಚ್ಚು ಬೋಧಿಸಿದ್ದರೆ, ಅದನ್ನು ಅನುಷ್ಠಾನಕ್ಕೆ ತಂದಿದ್ದರೆ, ನಮ್ಮಲ್ಲಿರುವ ಅನೇಕ ದೋಷಗಳು ಮತ್ತು ದುಃಖದ ಬಹುಭಾಗ ಮಾಯವಾಗುತ್ತಿದ್ದುವು ಎಂಬುದರಲ್ಲಿ ಸಂದೇಹವಿಲ್ಲ.

''ಮಾನವ ಇತಿಹಾಸದಲ್ಲೆಲ್ಲಾ ಪ್ರಖ್ಯಾತರಾದ ಸ್ತ್ರೀ ಪುರುಷರ ಜೀವನದಲ್ಲಿ, ಎಲ್ಲಾ ಕ್ರಿಯೆಯ ಶಕ್ತಿಗಿಂತಲೂ ಪ್ರಮುಖವಾಗಿದ್ದುದೆಂದರೆ ಅದು ಅವರ ಶಕ್ತಿಯಲ್ಲಿ ಇರುವ ಶ್ರದ್ಧೆ. ಯಾರು ತನ್ನನ್ನು ತಾನೇ ದ್ವೇಷಿಸಿಕೊಳ್ಳುತ್ತಾನೋ, ಅಂದರೆ ಆತ್ಮನಿಂದೆ ಮಾಡಿಕೊಳ್ಳುತ್ತಾನೋ ಆತನು ಭ್ರಷ್ಟನಾಗುವುದಕ್ಕೆ ದಾರಿ ಆಗಲೇ ತೆರೆದಿದೆ. ನಮ್ಮ ಪ್ರಥಮ ಕರ್ತವ್ಯ ಆತ್ಮನಿಂದೆಯ ತ್ಯಾಗ. ಏಕೆಂದರೆ ನಮ್ಮ ಏಳಿಗೆಗೆ ಮೊದಲು ಬೇಕಾದುದು ಆತ್ಮವಿಶ್ವಾಸ, ಭಗವಂತನಲ್ಲಿ ವಿಶ್ವಾಸ. ಆತ್ಮಶ್ರದ್ಧಾಹೀನನಿಗೆ ಭಗವಂತನಲ್ಲಿ ಶ್ರದ್ಧೆ ಎಂದಿಗೂ ಸಾಧ್ಯವಾಗುವುದಿಲ್ಲ.''

ಆತ್ಮಶ್ರದ್ಧೆಯುಳ್ಳವರು ಏನನ್ನಾದರೂ ಸಾಧಿಸಬಹುದು. ನಮ್ಮ ಶ್ರದ್ಧೆಯು ಸುಪ್ತವಾಗಿರುವ ದಿವ್ಯತೆಯನ್ನು ವ್ಯಕ್ತಗೊಳಿಸುತ್ತದೆ. ಆ ಮಹಾಶಕ್ತಿಯನ್ನು ವ್ಯಕ್ತಗೊಳಿಸುವುದಕ್ಕೆ ಪ್ರಯತ್ನಪಡಬೇಕು. ಆತ್ಮಶ್ರದ್ಧೆಯುಂಟಾದರೆ ಭಗವಂತನನ್ನು ಕಾಣಬಹುದು ಮತ್ತು ಜೀವನದಲ್ಲಿ ಏನನ್ನಾದರೂ ಸಾಧಿಸಬಹುದು.

**''ಶ್ರದ್ಧೆ ಎಂಬ ಪದವನ್ನು ನಾನು ಭಾಷಾಂತರ ಮಾಡುವುದಿಲ್ಲ. ಅದು ಬಹಳ ತಪ್ಪಾಗುವುದು. ತಿಳಿದುಕೊಳ್ಳುವುದಕ್ಕೆ ಅತಿ ಸುಂದರವಾದ ಪದ ಇದು.''**

**''ಆತ್ಮಶ್ರದ್ಧೆಯನ್ನು ಸಾರುವುದೇ ನನ್ನ ಜೀವನದ ಧ್ಯೇಯ. ಶ್ರದ್ಧೆಯೇ ಮಾನವ ಕೋಟಿಯ ಮತ್ತು ಎಲ್ಲಾ ಧರ್ಮಗಳ ಅತ್ಯಂತ ಶಕ್ತಿಪೂರ್ಣವಾದ ಅಂಶ ಎಂಬುದನ್ನು ಮತ್ತೊಮ್ಮೆ ಹೇಳುತ್ತೇನೆ.''**

**— ಸ್ವಾಮಿ ವಿವೇಕಾನಂದ**